

‘ಮಂಗಳೂರು ರೆಸಿಪೀಸ್’ನ ಜ್ಯೋತ್ನಾ ಪಯಣ

# ಅಡುಗೆಯಿಂದ ಉದ್ಯಮದವರೆಗೆ..

**ನಾನ್ ವೆಜ್‌ನ ನಾನಾ ಬಗೆಯ ವಿಶೇಷ ಅಡುಗೆಯ ರುಚಿಗೆ ಫೇಸ್‌ಬುಕ್‌ನ ‘ಮಂಗಳೂರು ರೆಸಿಪೀಸ್’ ಪುಟವನ್ನು ನೋಡಬೇಕು. ಕರಾವಳಿ ಶೈಲಿಯ ಮೀನಿನ ಪದಾರ್ಥ, ಚಿಕನ್ನಿನ ಹಲವು ತಿನಿಸು ತಯಾರಿಸುವ ಹಲವು ವಿಡಿಯೊಗಳು ಇಲ್ಲಿ ಸಿಗುತ್ತವೆ.**

**■ ಸಂಧ್ಯಾ ಹೆಗಡೆ**

ಅಮ್ಮನ ಸೆರಗಿನ ಮರೆಯಲ್ಲಿ ಬಾಲ್ಯ ಕಳೆದ ಪೋರಿ ಪಿಯುಸಿ ನಂತರ ಸೇರಿದ್ದು ಎಂಜಿನಿಯರಿಂಗ್ ಕಾಲೇಜಿಗೆ. ಬಯೊಟೆಕ್ ಎಂಜಿನಿಯರಿಂಗ್ ಮುಗಿಸಿದಾಗ ಉದ್ಯೋಗವೂ ಸಿಕ್ಕಿತು, ಮದುವೆಯೂ ಆಯ್ತು. ಮದುವೆಯೊಂದಿಗೆ ಬಳುವಳಿಯಾಗಿ ಬರುವ ಅಡುಗೆಮನೆಯೆಂಬ ಜೋಳಿಗೆ ಹೆಗಲಿಗೆ ಜೋತು ಬಿದ್ದಾಗ ಇಷ್ಟವೋ ಕಷ್ಟವೋ ನಿಭಾಯಿಸಲೇಬೇಕು. ನಿತ್ಯ ಬೆಳಿಗ್ಗೆ ಅಡುಗೆಮನೆಯಲ್ಲಿ ಒಗ್ಗರಣೆ ಡಬ್ಬಿ ತೆಗೆಯುವ ಮುನ್ನ ಅಮ್ಮನಿಗೆ ಕಾಲ್ ಮಾಡಿ ರೆಸಿಪಿ ಕೇಳುತ್ತಿದ್ದ ಈಕೆ ಈಗ ಅಡುಗೆ ಪ್ರಿಯರ ನೆಚ್ಚಿನ ಶೆಫ್.

‘ಮಂಗಳೂರು ರೆಸಿಪೀಸ್’ ಫೇಸ್‌ಬುಕ್ ಪುಟ ಹಾಗೂ ಯೂಟ್ಯೂಬ್ ಚಾನಲ್ ಗೊತ್ತಿಲ್ಲದ ಕರಾವಳಿಗರು ಇಲ್ಲ. ಮದುವೆಯಾಗಿ ನವಜೀವನಕ್ಕೆ ಕಾಲಿಟ್ಟ ಹೆಣ್ಣುಮಕ್ಕಳು, ಹೊಸ ರುಚಿಗೆ ಹಂಬಲಿಸುವವರು, ವಿಶೇಷವಾಗಿ ನಾನ್ ವೆಜ್ ಅಡುಗೆ ಇಷ್ಟಪಡುವವರು ಮೊಬೈಲ್‌ನಲ್ಲಿ ಮೊದಲು ಟಂಕಿಸುವುದೇ ಮಂಗಳೂರು ರೆಸಿಪೀಸ್. ಈ ಪಾಕಶಾಲೆಯ ರೂವಾರಿ, ಯೂಟ್ಯೂಬರ್, ಮಂಗಳೂರಿನ ಜ್ಯೋತ್ನಾ.

ಎಂಜಿನಿಯರಿಂಗ್ ಪದವೀಧರೆ ಜ್ಯೋತ್ನಾ, ತಾವೊಂದು ಒಳ್ಳೆಯ ಶೆಫ್ ಆಗಬಹುದೆಂದು ಅರೆಕ್ಷಣವೂ ಯೋಚಿಸಿರಲಿಲ್ಲ. ಅವರ ಕೈರುಚಿಯ ತಾಕತ್ತು ತೋರಿಸಿಕೊಟ್ಟಿದ್ದು ಕೋವಿಡ್–19 ಎಂಬ ಸಾಂಕ್ರಾಮಿಕ ರೋಗದ ದುರಿತ ಕಾಲ.

